# 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## **Spl.C**.445/2018

| | | | | |
|---|---|---|---|---|
| ಸಾಕ್ಷಿದಾರರ ಹೆಸರು | : | ಹೆಚ್ ಪಿ ಅರಕೇಶ್ ಮೂರ್ತಿ | ಪ್ರಾಸಾ: | 1 |
| ತಂದೆ ಹೆಸರು | : | ಪುಟ್ಟ ಸ್ವಾಮಾಚಾರ್ | ಚಾಸಾ: | 1 |
| ವಯಸ್ಸು | : | 47 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ:28.07.2025 | |
| ವೃತ್ತಿ | : | AEE., CHESCOM, ಕೆ ಆರ್ ನಗರ | | |
| ವಾಸ ಸ್ಥಳ | : | ಬೋಗಾದಿ ಮೈಸೂರು | | |

**ಮುಖ್ಯ ವಿಚಾರಣೆ: ಸರಕಾರಿ ಅಭಿಯೋಜಕರವರಿಂದ**:

1. 2009 ರಿಂದ ಆಗಸ್ಟ್ 2012 ರವರೆಗೆ ನಾನು ಉದಯಗಿರಿ ಘಟಕ ಮೈಸೂರಿನಲ್ಲಿ ಸಹಾಯಕ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ದಿಃ 18.07.2011 ರಂದು ದೇವನೂರು ವಿದ್ಯುತ್ ಸ್ಟೇಷನ್‌ಯಿಂದ ಕೊಲಂಬಿಯಾ ಏಷಿಯಾ ಆಸ್ಪತ್ರೆಯವರೆಗೆ ರಾಜೀವ್ ನಗರ 3 ನೇ ಹಂತದ ಬಳಿ ಅಳವಡಿಸಲಾಗಿದ್ದ 11 KV AB ವಿದ್ಯುತ್ ಕೇಬಲ್, ಸುಮಾರು 1100 ಮೀಟರ್ ಗಳಷ್ಟು ಕಳುವಾಗಿರುತ್ತದೆ ಎಂದು MUDA ಅಧಿಕಾರಿಗಳು ನಮಗೆ ತಿಳಿಸಿರುತ್ತಾರೆ.

2. ನಂತರ ನಾನು MUDA ಅಧಿಕಾರಿಗಳ ಜೊತೆ ಸ್ಥಳ ಪರಿಶೀಲಿಸಲಾಗಿ, ರಸ್ತೆಯ ಅಗಲೀಕರಣ ಸಲುವಾಗಿ MUDA ಅಧಿಕಾರಿಗಳು ನಮ್ಮ ಇಲಾಖೆಗೆ ಸೇರಿದ್ದ ಸದರಿ AB ವಿದ್ಯುತ್ ಕೇಬಲ್ ನ್ನು ಸ್ವಯಂ ನಿರ್ವಹಣೆ ಯೋಜನೆ ಅಡಿ ಸ್ಥಳಾಂತರಿಸುವ ಕೆಲಸ ಕೈಗೊಂಡಿದ್ದು, ಈ ಸಮಯದಲ್ಲಿ ಕೇಬಲ್ ಕಳ್ಳತನವಾಗಿರುತ್ತದೆ. ಸದರಿ ಕೇಬಲ್ ನ ಮೌಲ್ಯ ಸುಮಾರು ರೂ.5 ಲಕ್ಷ ಗಳಾಗಿರುತ್ತದೆ. ಈ ಬಗ್ಗೆ ನಾನು ದಿಃ 19.07.2012 ರಂದು ಸಂಜೆ 7

ಗಂಟೆ ಸಮಯದಲ್ಲಿ ಉದಯಗಿರಿ ಪೊಲೀಸ್ ಠಾಣೆಗೆ ದೂರನ್ನು ನೀಡಿದ್ದೇನೆ. ದೂರನ್ನು **ನಿಪಿ.1** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು.

3. ದಿಃ 20.07.2012 ರಂದು ಬೆಳಗ್ಗೆ 9.30 ಯಿಂದ 10.30 ಗಂಟೆಯವರೆಗೆ ನಾನು ಸ್ಥಳವನ್ನು ತೋರಿಸಿದ ಮೇರೆಗೆ ಪೊಲೀಸರು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ಮಾಡಿ ನನ್ನ, ಚಾಸಾ-2 ಮತ್ತು 3 ರವರ ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಪಂಚನಾಮೆಯನ್ನು **ನಿಪಿ.2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.2(ಎ)** ಎಂದು ಗುರುತಿಸಲಾಯಿತು.

4. ದಿಃ 28.07.2012 ರಂದು ಕೆಲವು ಪತ್ರಿಕೆಗಳಲ್ಲಿ ವಿದ್ಯುತ್ ಕೇಬಲ್ ಪತ್ತೆಯಾಗಿದೆ ಎಂದು ಬಂದ ಮೇರೆಗೆ ವಿಚಾರವನ್ನು ತಿಳಿದು, ಉದಯಗಿರಿ ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ಅ ಸಮಯದಲ್ಲಿ ಪೊಲೀಸ್ ಇನ್ಸಪೆಕ್ಟರ್ ಸುನೀಲ್ ಕುಮಾರ್ ರವರು ತುಂಡಾದ ವಿದ್ಯುತ್ ಕೇಬಲ್ ನ್ನು ನನಗೆ ತೋರಿಸಿರುತ್ತಾರೆ. ಸದರಿ ವಿದ್ಯುತ್ ಕೇಬಲ್ ಸುಮಾರು 786 ಮೀಟರ್ ಷ್ಟು ಉದ್ದವಿತ್ತು. ಅದನ್ನು ತುಂಡಾಗಿ ಕತ್ತರಿಸಿರುವುದು ಕಂಡು ಬಂದಿರುತ್ತದೆ. ಅ ವಿದ್ಯುತ್ ಕೇಬಲ್ ನಮ್ಮ ಇಲಾಖೆಗೆ ಸಂಬಂಧಪಟ್ಟಿದ್ದಿರುತ್ತದೆ.

5. ನಂತರ ಪೊಲೀಸ್ ಇನ್ಸಪೆಕ್ಟರ್ ರವರು ನನಗೆ ಎರಡು ಪೋಟೋಗಳನ್ನು ತೋರಿಸಿ, ಅ ಪೋಟೋಗಳಲ್ಲಿರುವ ಆರೋಪಿ 1 ಮತ್ತು 2 ರವರು ವಿದ್ಯುತ್ ಕೇಬಲ್ ನ್ನು

ಕಳುವು ಮಾಡಿರುವ ಅಸಾಮಿಗಳು ಎಂಬುದಾಗಿ ಹೇಳಿರುತ್ತಾರೆ. ಅ ಪೋಟೋಗಳನ್ನು ನೋಡಿದರೆ ಗುರುತಿಸುತ್ತೇನೆ. ಈ ಬಗ್ಗೆ ನಾನು ಮರು ಹೇಳಿಕೆ ಕೊಟ್ಟಿದ್ದೇನೆ.

**(ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು)**

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು